### 7. ಚೀನಾದ ಹಿಡಿತದಿಂದ ಮುಕ್ತವಾಗಿದೆ ಎಂಬುದನ್ನು ಸಾಬೀತುಪಡಿಸಲು ತಾಕೀತು

ಚೀನಾದ ಪ್ರಭಾವಕ್ಕೊಳಗಾಗಿ ಕಾರ್ಯನಿರ್ವಹಿಸುವುದರಿಂದ ಹೊರಬಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸದಿದ್ದರೆ ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯೂಎಚ್‌ಒ) ಹೊರನಡೆಯುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಡಬ್ಲ್ಯೂಎಚ್‌ಒ ಮುಂದಿನ 30 ದಿನದೊಳಗೆ ಸ್ವತಂತ್ರವಾಗಿ ಕೆಲಸ ಮಾಡುವ ಮನೋಭಾವ ಪ್ರದರ್ಶಿಸದಿದ್ದರೆ ಅದಕ್ಕೆ ಆರ್ಥಿಕ ನೆರವು ನೀಡುವುದನ್ನು ಕಾಯಂ ಸ್ಥಗಿತಗೊಳಿಸುವುದಾಗಿಯೂ ಗುಡುಗಿದ್ದಾರೆ. ಡಬ್ಲ್ಯೂಎಚ್‌ಒಗೆ ನೀಡಬೇಕಾದ 500 ಮಿಲಿಯನ್ ಡಾಲರ್ ವಾರ್ಷಿಕ ನೆರವನ್ನು ಟ್ರಂಪ್ ಕಳೆದ ತಿಂಗಳು ತಡೆಹಿಡಿದಿದ್ದಾರೆ. ಜಿನೀವಾದಲ್ಲಿ ನಡೆಯುತ್ತಿರುವ ವಿಶ್ವ ಆರೋಗ್ಯ 73ನೇ ಅಧಿವೇಶನದ ಸಂದರ್ಭದಲ್ಲೇ ಡಬ್ಲ್ಯೂಎಚ್‌ಒ ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್ ಘೆಬ್ರಿಯೆಸಸ್‌ರಿಗೆ ಮೇ 18ರಂದು ಬರೆದ ನಾಲ್ಕು ಪುಟಗಳ ಪತ್ರದಲ್ಲಿ ಟ್ರಂಪ್ ಈ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಡಬ್ಲ್ಯೂಎಚ್‌ಒ ಸುಧಾರಣೆಗೆ ತಮ್ಮೊಂದಿಗೆ ಚರ್ಚೆ ಆರಂಭಿಸಿದ್ದು, ತುರ್ತಾಗಿ ಕ್ರಮಕೈಗೊಳ್ಳಬೇಕಾಗಿದೆ ಎಂದು ಮಹಾನಿರ್ದೇಶಕರಿಗೆ ಟ್ರಂಪ್ ಹೇಳಿದ್ದಾರೆ. ಡಬ್ಲ್ಯೂಎಚ್‌ಒ ಸಾಂಕ್ರಾಮಿಕವನ್ನು ಸರಿಯಾಗಿಯೇ ನಿಭಾಯಿಸಿದೆ. ಇದನ್ನು ರಾಜಕೀಯಗೊಳಿಸಬಾರದು. ಎಲ್ಲರೂ ಒಗ್ಗಟ್ಟಾಗುವುದೇ ರೋಗ ಸೋಲಿಸಲು ಇರುವ ಏಕೈಕ ಮಾರ್ಗ ಎಂದು ಟೆಡ್ರೋಸ್ ಟ್ರಂಪ್ ಟೀಕೆಗೆ ಉತ್ತರಿಸಿದ್ದರು.

ಅಮೆರಿಕದ ಬೆದರಿಕೆಯಿಂದ ಆತಂಕಕ್ಕೆ ಈಡಾಗಿರುವ ವಿಶ್ವ ಆರೋಗ್ಯ ಸಂಸ್ಥೆಯ ನೆರವಿಗೆ ಫ್ರಾನ್ಸ್, ದಕ್ಷಿಣ ಕೊರಿಯಾ, ದಕ್ಷಿಣ ಆಫ್ರಿಕಾ ಮತ್ತು ಜರ್ಮನಿ ಬಂದಿವೆ, ಸಂಸ್ಥೆಯ ಕಾರ್ಯನಿರ್ವಹಣೆಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದಾಗಿ ಈ ರಾಷ್ಟ್ರಗಳ ಚುನಾಯಿತ ಮುಖ್ಯಸ್ಥರು ಅಭಯ ನೀಡಿದ್ದಾರೆ.

ವೈರಸ್ ವ್ಯಾಪಿಸುವಲ್ಲಿ ಚೀನಾದ ಪಾತ್ರವಿದೆ ಹಾಗೂ ಡಬ್ಲ್ಯೂಎಚ್‌ಒ ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಮಾರಕ ಕೊರೊನಾ ಸಾಂಕ್ರಾಮಿಕ ವ್ಯಾಧಿಗೆ ಸ್ಪಂದಿಸಲು ಟೆಡ್ರೋಸ್ ಮತ್ತು ಡಬ್ಲ್ಯೂಎಚ್‌ಒ ಸರಿಯಾದ ಕ್ರಮ ಕೈಗೊಳ್ಳಲಿಲ್ಲ ಹಾಗೂ ಮುಚ್ಚಿಹಾಕಲು ಪ್ರಯತ್ನಿಸಿದೆ. ಡಬ್ಲ್ಯೂಎಚ್‌ಒ ಮಾಡಿದ ಮುಚ್ಚುಮರೆಯು ಜಗತ್ತಿಗೆ ಅತಿ ದುಬಾರಿಯಾಗಿ ಪರಿಣಮಿಸಿತು ಎಂದು ಟ್ರಂಪ್ ಆರೋಪ ಮಾಡಿರುತ್ತಾರೆ.

**ಸ್ವತಂತ್ರ ತನಿಖೆಗೆ ಅಸ್ತು :** ಕೊರೊನಾ ಸೋಂಕಿನ ಹಾವಳಿಗೆ ಡಬ್ಲ್ಯೂಎಚ್‌ಒ ಹೇಗೆ ಪ್ರತಿಕ್ರಿಯಿಸಿತು ಮತ್ತು ನಿಭಾಯಿಸಿತು ಎನ್ನುವ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕೆಂಬ ಸದಸ್ಯ ದೇಶಗಳ ಒತ್ತಾಯಕ್ಕೆ ಮಣಿದಿರುವ ಡಬ್ಲ್ಯೂಎಚ್‌ಒ ತನಿಖೆಗೆ ಸಮ್ಮತಿಸಿದೆ. ಭಾರತ ಸೇರಿದಂತೆ ಸುಮಾರು 123 ದೇಶಗಳು ತಮ್ಮ ಆಗ್ರಹವುಳ್ಳ ಗೊತ್ತುವಳಿಯೊಂದನ್ನು ಮಂಡಿಸಿದ್ದವು. ಆಫ್ರಿಕಾ ದೇಶಗಳ ಒಕ್ಕೂಟ, ಐರೋಪ್ಯ ಒಕ್ಕೂಟ ಮತ್ತು ಇತರ ದೇಶಗಳು ತನಿಖೆಗೆ ಒಕ್ಕೊರಲ ದನಿಯೆತ್ತಿದ್ದವು. ಸೋಂಕು ನಿರ್ವಹಣೆ ಬಗೆಗಿನ ತನಿಖೆಗೆ ಒಪ್ಪಿರುವ ಜಾಗತಿಕ ಆರೋಗ್ಯ ವೇದಿಕೆ, ವೈರಸ್ ಮೂಲದ ಬಗ್ಗೆ ತನಿಖೆ ನಡೆಸುವ ಬಗ್ಗೆ ಮಾತ್ರ ಮೌನವಾಗಿದೆ. ಈ ವಿಷಯವೇ ಅತ್ಯಂತ ಮಹತ್ವದ್ದಾಗಿದ್ದು ವೈರಾಣು ಮೂಲದ ಬಗ್ಗೆ ಚೀನಾ ಮತ್ತು ಅಮೆರಿಕ ಪರಸ್ಪರರ ವಿರುದ್ಧ ದೋಷಾರೋಪ ಮಾಡಿ ಕಚ್ಚಾಡುತ್ತಿವೆ. ಚೀನಾದ ಪ್ರಯೋಗಾಲಯದಲ್ಲಿ ವೈರಸ್ ಸೃಷ್ಟಿಯಾಗಿರುವುದಕ್ಕೆ ತಮ್ಮ ಬಳಿ ಸಾಕ್ಷ್ಯವಿದೆ ಎಂದು ಟ್ರಂಪ್ ಬಲವಾಗಿ ಪ್ರತಿಪಾದಿಸುತ್ತಿದ್ದಾರೆ.

**ಮುಕ್ತವಾಗಿ ಮಾಹಿತಿ ನೀಡಿದ್ದೇವೆ :** ವುಹಾನ್‌ನಲ್ಲಿ ವ್ಯಾಧಿ ಕಾಣಿಸಿಕೊಂಡ ನಂತರ ಚೀನಾ ಮುಕ್ತವಾಗಿ, ಪಾರದರ್ಶಕತೆ ಹೊಣೆಗಾರಿಕೆಯಿಂದ ವರ್ತಿಸಿದೆ. ವೈರಸ್‌ನ ಅನುವಂಶೀಯ ವಿವರ ಸೇರಿ ಎಲ್ಲ ಮಾಹಿತಿಗಳನ್ನು ಚೀನಾ ಡಬ್ಲ್ಯೂಎಚ್‌ಒ ಹಾಗೂ ಇತರ ದೇಶಗಳಿಗೆ ಒದಗಿಸಿದೆ ಎಂದು ಅಧ್ಯಕ್ಷ ಕ್ಸಿಜಿನ್‌ಪಿಂಗ್ ಹೇಳಿದ್ದಾರೆ. ಕೊರೊನಾ ವಿರುದ್ಧ ಹೋರಾಡಲು 200 ಕೋಟಿ ಡಾಲರ್ ನೆರವು ನೀಡುವುದಾಗಿಯೂ ಪ್ರಕಟಿಸಿದ್ದಾರೆ.

**ಭಾರತಕ್ಕೆ ಡಬ್ಲ್ಯೂಎಚ್‌ಒ ಕಾರ್ಯಕಾರಿ ನೇತೃತ್ವ :** ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಮುಖ್ಯಸ್ಥ ಸ್ಥಾನವನ್ನು ಭಾರತ ಅಲಂಕರಿಸಿದೆ. ಮೇ 18 ಮತ್ತು 19ರಂದು ನಡೆದ 73ನೇ ವಿಶ್ವ ಆರೋಗ್ಯ ಸಭೆಯಲ್ಲಿ ಭಾರತವನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ. ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಕೇಂದ್ರ ಆರೋಗ್ಯ ಸಚಿವ

ಡಾ:ಹರ್ಷವರ್ಧನ್ ಹೆಸರನ್ನು ಭಾರತ ಪ್ರಸ್ತಾಪಿಸಿದೆ. ಕಳೆದ ಒಂದು ವರ್ಷದಿಂದ ಜಪಾನ್ ಮುಖ್ಯಸ್ಥ ಸ್ಥಾನದಲ್ಲಿತ್ತು.

ಆಧಾರ:ವಿಜಯವಾಣಿ, ದಿನಾಂಕ:20.05.2020